ದಿನಾಂಕಃ **26-07-2024** ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ಶ್ರೀ ಜಿ ಎಸ್ ಪಿ ವಕೀಲರಿಂದಃ

ದಾವೆಗೆ ಸಂಬಂಧಿಸಿದಂತೆ ಈ ಕೆಳಗಿನ ದಾಖಲಾತಿಗಳನ್ನು ಹಾಜರು ಮಾಡುತ್ತಿದ್ದು ಸದರಿ ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಿಕೊಳ್ಳಲು ಕೋರುತ್ತೇನೆ.

4. ನಿಗಧಿತ ಸ್ಟಾಂಪ್ ಡ್ಯೂಟಿ ಮತ್ತು ಪೆನಾಲ್ಟಿಯನ್ನು ಕಟ್ಟಿದ ನಂತರ ಸಾಕ್ಷಿಗೆ ಸದರಿ ದಾಖಲಾತಿಯನ್ನು ತೋರಿಸಿದ ಮೇರೆಗೆ ಪ್ರತಿವಾದಿಯ ಪರ ವಕೀಲರು ಒಪ್ಪಂದದ ಕ್ರಯದ ಕರಾರು ಪತ್ರದ ಪ್ರಕಾರ ದಾವಾ ಸ್ವತ್ತಿನ ಸ್ವಾಧೀನವನ್ನು ವಾದಿಯವರಿಗೆ ಕೊಟ್ಟಿರುವುದರಿಂದ ಸದರಿ ಕ್ರಯದ ಕರಾರು ಒಪ್ಪಂದದ ಪತ್ರ ನೋಂದಣಿ ಆಗಬೇಕು ಸದರಿ ದಾಖಲಾತಿ ನೋಂದಣಿ ಆಗಿರುವುದಿಲ್ಲ ಆದರೆ ವಾದಿಯಪರ ವಕೀಲರು ದಿಃ 24-09-2001 ರಂದು amendment ಆಗಿದೆ ಅದರಿಂದ compulsory registration ಸದರಿ ದಾಖಲಾತಿಗೆ ಬೇಕಾಗಿಲ್ಲ ಎಂದು ಅವರ ವಾದವನ್ನು ಮಂಡಿಸಿರುತ್ತಾರೆ ದಾಖಲಾತಿಯನ್ನು ಮೇಲ್ನೋಟಕ್ಕೆ ಪರಿಶೀಲನೆ ಮಾಡಿದ ನಂತರ ದಾಖಲಾತಿಯನ್ನು ದಿಃ 08-09-2001 ರಂದು ಬರೆದಿರುತ್ತಾರೆ ಅದರಿಂದ ಅವರ ತಕರಾರನ್ನು ತಳ್ಳಿ ಇಟ್ಟು ಕ್ರಯದ ಒಪ್ಪಂದದ ಕರಾರು ಪತ್ರವನ್ನು ನಿಪಿ-4 ಎಂದು ಗುರುತಿಸಲಾಯಿತು ನಿಪಿ-4 ನ್ನು ಓಂಕಾರಮೂರ್ತಿಯವರು ನನ್ನ ಹೆಸರಿಗೆ ಬರೆದುಕೊಟ್ಟಿರುತ್ತಾರೆ. ನಿಪಿ-4 ಕ್ಕೆ ಪ್ರತಿವಾದಿಯಾದ ಓಂಕಾರಮೂರ್ತಿಯವರು 2 ಪುಟಗಳಲ್ಲಿ ಸಹಿ ಮಾಡಿರುತ್ತಾರೆ ಅವರ ಸಹಿಗಳನ್ನು ನಿಪಿ-4(ಎ) ಮತ್ತು (ಬಿ) ಎಂದು ಗುರುತಿಸಲಾಯಿತು ಹುಚ್ಚಪ್ಪರವರ ಮಗನಾದ ನಾಗರಾಜು ಮತ್ತು ಇನ್ನೊಬ್ಬ ನಾಗರಾಜು ರವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಸಾಕ್ಷಿ ಅವರ ಸಹಿಗಳನ್ನು ನೋಡಿ ಗುರುತಿಸಿರುವುದರಿಂದ ನಿಪಿ-4(ಸಿ) ಮತ್ತು (ಡಿ) ಎಂದು ಗುರುತಿಸಲಾಯಿತು. ಪತ್ರವನ್ನು ಬಿಕ್ಲಂದಾರರಾದ ನಾಗರಾಜು ಎಂಬು ವವರು ಬರೆದಿರುತ್ತಾರೆ ಸಾಕ್ಷಿ ಅವರ ಸಹಿಯನ್ನು ನೋಡಿ ಗುರುತಿಸಿರುವುದರಿಂದ ನಿಪಿ-4(ಇ) ಎಂದು ಗುರುತಿಸಲಾಯಿತು.

ಶ್ರೀ ಟಿ ಎನ್ ಎನ್ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು
ತಿಪಟೂರು.